# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 145 |
| ಸದಸ್ಯರ ಹೆಸರು | : | ಶ್ರೀ. ಐವನ್ ಡಿ'ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾಗಿದ ದಿನಾಂಕ | : | 10-12-2024 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಜಲಭಾಗ್ಯ ಯೋಜನೆಗೆ ಡಾಂಬರು ರಸ್ತೆ ಆಗಿದ್ದು, ಇದರ ನಿರ್ವಹಣೆ ಮಾಡದೇ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿದ್ದರೂ ಸರ್ಕಾರ ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಇರಲು ಕಾರಣಗಳೇನು; (ವಿವರ ನೀಡುವುದು) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಜಲಭಾಗ್ಯ ಯೋಜನೆಗೆ ಡಾಂಬರು ರಸ್ತೆ ಕಾಮಗಾರಿಯನ್ನು ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಕೈಗೆತ್ತಿಕೊಂಡಿರುವುದಿಲ್ಲ.<br><br>ಆದಾಗ್ಯೂ, ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ "ಜಲಸಿರಿ" ಯೋಜನೆಯಲ್ಲಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಮತ್ತು ಅಮೃತ್ ನೆರವಿನೊಂದಿಗೆ ನಿರಂತರ ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಸದರಿ ಯೋಜನೆಯಲ್ಲಿ ಪೈಪ್ ಲೈನ್ ಅಳವಡಿಸಲು ಅಗೆದ ಗುಂಡಿಗಳಿಗೆ ಪೈಪ್ ಲೈನ್ ಅಳವಡಿಸಿದ ನಂತರ ಸೀಮಿತವಾಗಿ ರಸ್ತೆ ಅಗೆದ ಜಾಗಗಳಲ್ಲಿ ಮಾತ್ರ ರಸ್ತೆಗಳನ್ನು ಮೂಲ ಸ್ಥಿತಿಗೆ (ಡಾಂಬರ, ಕಾಂಕ್ರಿಟ್ ರಸ್ತೆಗಳ) ಮರುನಿರ್ಮಾಣ ಮಾಡಲು ಗುತ್ತಿಗೆಯಲ್ಲಿ ಅವಕಾಶವಿದೆ. ಅದರಂತೆ ಅಗೆದ ರಸ್ತೆಗಳ ಮರು ನಿರ್ಮಾಣ ಮಾಡಲಾಗುತ್ತಿದೆ. ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| (ಆ) | ಸರ್ಕಾರ ಯೋಜನೆಗಳನ್ನು ಜಾರಿ ಮಾಡುವ ಸಂದರ್ಭದಲ್ಲಿ ರಸ್ತೆಯನ್ನು ಅಗೆಯುವುದಕ್ಕೆ, ಯಾವ ಯಾವ ಮಾನದಂಡಗಳ ಆಧಾರದ ಮೇಲೆ ಸರ್ಕಾರ ಪಡೆಯುವ ಶುಲ್ಕ ಎಷ್ಟು; ಎಷ್ಟು ಅವಧಿಯೊಳಗಾಗಿ ಕಾಮಗಾರಿ ಪೂರ್ಣಗೊಳಿಸಲು ಅವಕಾಶ ನೀಡಲಾಗುತ್ತದೆ; (ವಿವರ ನೀಡುವುದು) | ಸರ್ಕಾರದ ಯೋಜನೆಗಳನ್ನು ಜಾರಿ ಮಾಡುವ ಸಂದರ್ಭಗಳಲ್ಲಿ ರಸ್ತೆ ಅಗೆಯುವುದಕ್ಕೆ ಯಾವುದೇ ಶುಲ್ಕವನ್ನು ಸರ್ಕಾರ ಪಡೆಯುವುದಿಲ್ಲ.<br><br>ಬದಲಾಗಿ ಸದರಿ ಯೋಜನೆಯ ಕೊಳವೆ ಮಾರ್ಗವನ್ನು ಅಳವಡಿಸಲು ಅಗೆದ ರಸ್ತೆಗಳನ್ನು ಗುತ್ತಿಗೆ ಕರಾರಿನಲ್ಲಿ ಅವಕಾಶ ಕಲ್ಪಿಸಿದಂತೆ ಕೊಳವೆ ಮಾರ್ಗ ಅಳವಡಿಸಿ, ಜಲ ಪರೀಕ್ಷೆ ಆದ ನಂತರ ಕೂಡಲೇ ರಸ್ತೆಗಳನ್ನು ಪುನರ್‌ನಿರ್ಮಾಣ ಮಾಡಲಾಗುತ್ತಿದೆ. |

| | | |
|---|---|---|
| (ಇ) | ನಿಗಧಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳ್ಳದೇ ಇದ್ದಲ್ಲಿ ಸರ್ಕಾರ ಕೈಗೊಳ್ಳುವ ಕ್ರಮವೇನು; ಕ್ರಿಮಿನಲ್ ಪ್ರಕರಣ ದಾಖಲಿಸಲಾಗುತ್ತಿದೆಯೇ; | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ "ಜಲಸಿರಿ" ಯೋಜನೆಯಲ್ಲಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಮತ್ತು ಅಮೃತ್ ನೆರವಿನೊಂದಿಗೆ ನಿರಂತರ ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಪೈಪ್ ಲೈನ್ ಅಳವಡಿಸಲು ಅಗೆದ ಗುಂಡಿಗಳಿಗೆ ಪೈಪ್ ಲೈನ್ ಅಳವಡಿಸಿದ ನಂತರ ಸೀಮಿತವಾಗಿ ರಸ್ತೆ ಅಗೆದ ಜಾಗಗಳಲ್ಲಿ ಮಾತ್ರ ರಸ್ತೆಗಳನ್ನು ಗುತ್ತಿಗೆ ಕರಾರಿನನ್ವಯ ಮೂಲ ಸ್ಥಿತಿಗೆ (ಡಾಂಬರ್, ಕಾಂಕ್ರಿಟ್ ರಸ್ತೆಗಳ) ಮರು ನಿರ್ಮಾಣ ಗುತ್ತಿಗೆ ಕರಾರಿನನ್ವಯ ಮಾಡಲಾಗುತ್ತಿದೆ. |
| (ಈ) | ಮಂಗಳೂರಿನಲ್ಲಿ ರಸ್ತೆ ಅಗೆತದಿಂದ ರಸ್ತೆಗಳ ನಿರ್ವಹಣೆ ಇಲ್ಲದೇ ಉಂಟಾದ ಅಪಘಾತ ಪ್ರಕರಣಗಳೆಷ್ಟು; ಈ ಬಗ್ಗೆ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ? (ವಿವರ ನೀಡುವುದು) | ಇಲ್ಲಿಯವರೆವಿಗೂ ಜಲಸಿರಿ ಯೋಜನೆಯಲ್ಲಿ ಪೈಪ್ ಲೈನ್ ಅಳವಡಿಕೆಗಾಗಿ ರಸ್ತೆ ಅಗೆತದಿಂದ ಯಾವುದೇ ಅಪಘಾತ ಪ್ರಕರಣಗಳು ದಾಖಲಾಗಿರುವುದಿಲ್ಲ. |

ಕಡತ ಸಂಖ್ಯೆ:ನಅಇ 181 ಪಿಆರ್‌ಜೆ 2024

**(ಬಿ. ಎಸ್. ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು